ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

೧) ೨,೩೩೪ ಬಾವಿಗಳು—೫೪೯.೪೭ ಲಕ್ಷ ರೂ.ಗಳು.

೨) ೧,೩೫೨ ಬಾವಿಗಳು.

೩) ಇಲ್ಲ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಮೊದಲ ಪ್ರಶ್ನೆಗೆ ೨೩೩೪ ಭಾವಿಗಳಿಂದು ಹೇಳಿದ್ದಾರೆ. ಈ ಯೋಜನೆ ಯಾವಾಗ ಜಾರಿಗೆ ಬಂತು. ಮತ್ತು ೨೩೩೪ ಭಾವಿಗಳಲ್ಲಿ ೧೩೫೨ ಭಾವಿಗಳು ಮಾತ್ರ ನೀರಾವರಿಗೆ ಅಳವಡಿಸಿಕೊಳ್ಳಲಾಗಿದೆ. ಉಳಿದ ಭಾವಿಗಳನ್ನು ಏಕೆ ಅಳವಡಿಸಿಕೊಂಡಿಲ್ಲ ಎಂಬುದನ್ನೂ ಕೇಳಬಯಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜಾತಿ ಹಾಗೂ ಜನಾಂಗ ನಿಗಮದಿಂದ ಯಾವ ರೈತನು ೫ ಎಕರೆ ಒಳಗೆ ಜಮೀನನ್ನು ಹೊಂದಿರುತ್ತಾನೆ, ಆತನ ನೀರಾವರಿಗಾಗಿ ೮೪-೮೫ರಲ್ಲಿ ಬೋರ್‌ವೆಲ್ ಸ್ಕೀಮ್ ಅನ್ನು ಜಾರಿಗೆ ತಂದಿದ್ದೇವೆ. ಈಗ ಒಟ್ಟು ಎಂಟು ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಜಾರಿಗೆ ಬಂದಿದೆ. ಸಮಾರು ೧೫೦೦ ಬಾವಿಗಳಿಗೆ ವಿದ್ಯುಚ್ಛಕ್ತಿ ಕೊರತೆಯಿಂದ ಪಂಪನ್ನು ಹಾಕದೆ ನೀರಿನ ಕೊರತೆಯಾಗಿದೆ. ಪರಿಶಿಷ್ಟ ಜಾತಿ ಹಾಗೂ ಜನಾಂಗದ ನಿಗಮದಿಂದ ಕ್ರಮ ತೆಗೆದುಕೊಂಡು ಆದಷ್ಟು ಬೇಗ ಪಂಪು ಸೆಟ್ಟನ್ನು ಒದಗಿಸುವ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ಶಿವಣ್ಣ.—ಈ ಯೋಜನೆಗೆ ಕೊಡತಕ್ಕ ಸಬ್ಸಿಡಿ ಅಮೌಂಟ್‌ನಲ್ಲಿ ಕೇಂದ್ರ ಸರ್ಕಾರದ ನೆರವು ಎಷ್ಟು, ರಾಜ್ಯ ಸರ್ಕಾರದ ನೆರವು ಎಷ್ಟು ಎಂಬುದನ್ನು ಕೇಳಬಯಸುತ್ತೇನೆ. ನನ್ನ ಕೊನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ ಮಾನ್ಯ ಸಚಿವರು ಯಾವುದೇ ಕಂಪ್ಲೇಂಟ್ ಬಂದಿಲ್ಲವೆಂದು ತಿಳಿಸಿದರು. ನನಗೆ ತಿಳಿದ ಹಾಗೆ ಬೋರ್‌ವೆಲ್‌ಗಳನ್ನು ಅಳವಡಿಸಿದ ನಂತರ ಅವುಗಳನ್ನು ರಿಪೇರಿ ಮಾಡಬೇಕಾದರೆ ನಿಗಮದವರಿಗೆ ಬರೆದು, ಅವರು ಬೋರ್‌ವೆಲ್ ಕಂಪನಿಗೆ ಬರೆದು, ಮೆಕ್ಯಾನಿಕ್ ಬಂದು ರಿಪೇರಿ ಮಾಡಬೇಕಾಗಿರುತ್ತದೆ. ಇದರಿಂದ ಬಹಳ ತಡವಾಗುತ್ತದೆ. ನಿಮ್ಮ ನಿಗಮದಿಂದಲೇ ರಿಪೇರಿ ಮಾಡತಕ್ಕ ಸೌಲಭ್ಯವನ್ನು ಸರ್ಕಾರ ಹಾಕಿಕೊಂಡಿದೆಯೇ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯದಂತೆ ಈ ಕಾರ್ಯಕ್ರಮ ಕೇಂದ್ರ ಸರ್ಕಾರದ ಸಹಕಾರದಿಂದ ಜಾರಿಗೆ ಬಂದಿದೆ. ಮಾನ್ಯ ಸದಸ್ಯರ ಕಳವಳದಂತೆ ನಿಗಮದ, ಮಂಡಲ ಸದಸ್ಯರನ್ನು ನಮ್ಮ ಕಛೇರಿಗೆ ಕರೆಯಿಸಿ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ಈ ಬೋರ್‌ವೆಲ್‌ಗಳು ಏನಾ ಫೇಲ್ಯೂರ್ ಆಗಿವೆ ಅವುಗಳನ್ನು ರಿಪೇರಿ ಮಾಡಿಸುವ ಬಗ್ಗೆ ಆದಷ್ಟು ಬೇಗ ಚರ್ಚೆ ಮಾಡಿ ಅದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಶಿವಣ್ಣ.—ಈಗ ಬಾವಿಗಳನ್ನು ತೋಡಲು ಏನಾ ಸಬ್ಸಿಡಿ ಹಣವನ್ನು ಕೊಡಲಾಗಂತ್ತಿದೆ ಅದೇ ರೀತಿ ಈ ಜನರು ತಮ್ಮ ಜಮೀನುಗಳ ಸುತ್ತ ಬೇಲಿ ಹಾಕಿಕೊಳ್ಳಲು ಮತ್ತು ನೀರಾವರಿ ಸೌಲಭ್ಯಕ್ಕೆಂದು ಪೈಪ್‌ಗಳನ್ನು ತಮ್ಮ ಜಮೀನುಗಳಲ್ಲಿ ಅಳವಡಿಸಲು ಹಾಗೂ ಇತರೇ ಅಭಿವೃದ್ಧಿ ಕಾರ್ಯಗಳಿಗೆ ಸಹ ಸಬ್ಸಿಡಿ ಕೊಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಪ್ರಸ್ತುತ ಯೋಜನೆಯಲ್ಲಿ ಇದಕ್ಕೆಲ್ಲಾ ಅವಕಾಶ ಇಲ್ಲ. ಆದರೂ ಇದರ ಬಗ್ಗೆ ಯೋಚನೆ ಮಾಡುತ್ತೇವೆ.

ಮಂಲೆ ಮಹದೇಶ್ವರ ದೇವಾಲಯದ ಆಡಳಿತ

೨೦೨೨. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಧಾರ್ಮಿಕ ಹಾಗೂ ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಮಲೆ ಮಹದೇಶ್ವರ ಬೆಟ್ಟದಲ್ಲಿ ಇರುವ ಕ್ಷೇತ್ರಾಧಿಕಾರಿಯವರ ಆಡಳಿತ ಹಾಗೂ ಇನ್ನೂ ಅನೇಕ ವ್ಯವಹಾರಗಳ ಬಗ್ಗೆ ದೂರುಗಳು ಸರ್ಕಾರಕ್ಕೆ ಬಂದಿರುವುದು ನಿಜವೆ?

ಆ) ಅಲ್ಲದೆ ಆ ಕ್ಷೇತ್ರದಲ್ಲಿರುವ ನೌಕರರ ಬಡ್ತಿ ವಿಷಯದಲ್ಲಿ ಕಾನೂನಿಗೆ ವಿರುದ್ಧವಾಗಿ ಮಾಡಿರುವುದು ಸರ್ಕಾರಕ್ಕೆ ತಿಳಿದಿರುತ್ತದೆಯೆ?

ಇ) ಸದರೀ ದೇವಸ್ಥಾನದ ಲಕ್ಷಾಂತರ ರೂಪಾಯಿಗಳ ಕಟ್ಟಡದ ಕೆಲಸಗಳು ಹಾಗೂ ಇತರೆ ಕಾಮಗಾರಿ ಕೆಲಸಗಳನ್ನು ಟೆಂಡರ್ ಕರೆಯದೆ, ಆಡಳಿತಾಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ರೀತಿಯಲ್ಲಿ ಪ್ರತ್ಯೇಕ ಮಾಡಿ, ತಮ್ಮ ಆಪ್ತರ ಹೆಸರಿನಲ್ಲಿ ಕೆಲಸಗಳನ್ನು ನಡೆಸುತ್ತಿದ್ದಾರೆಂಬ ದೂರು ಬಂದಿದೆಯೇ?

ಈ) ಹಾಗೆ ಬಂದಿದ್ದ ಪಕ್ಷದಲ್ಲಿ ಸರ್ಕಾರ ಅದನ್ನು ಸರಿ ಮಾಡಲು ಏನು ಕ್ರಮ ಕೈಗೊಂಡಿದೆ?

ಶ್ರೀ ಕೆ. ಅಮರನಾಥಶೆಟ್ಟಿ (ಧಾರ್ಮಿಕ ಹಾಗೂ ದತ್ತಿ ರಾಜ್ಯ ಮಂತ್ರಿಗಳು). —

ಅ) ಹೌದು

ಆ) ಈ ವಿಷಯದಲ್ಲಿ ವಿಚಾರಣೆ ಮಾಡಲಾಗಿ ದೂರುಗಳು ನಿಜಾಂಶವಲ್ಲವೆಂಬುದಾಗಿ ತಿಳಿದು ಬಂದಿದೆ.

ಇ) ಹೌದು.

ಈ) ಈ ದೂರುಗಳ ಬಗ್ಗೆ ವಿಚಾರಣೆ ಮಾಡಲಾಗಿದೆ ಮತ್ತು ಇವುಗಳಲ್ಲಿ ನಿಜಾಂಶವಿಲ್ಲವೆಂಬುದಾಗಿ ತಿಳಿದು ಬಂದಿದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ. — ನನ್ನ ಮೊದಲನೆಯ ಪ್ರಶ್ನೆಗೆ 'ಹೌದು' ಎಂದು ಒಪ್ಪಿದ್ದಾರೆ. ಹಾಗಿದ್ದರೆ ಈ ದೂರುಗಳ ಬಗ್ಗೆ ಯಾರು ವಿಚಾರಣೆ ಮಾಡಿದರು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಮತ್ತೆ ನನ್ನ ಮೂರನೆಯ ಪ್ರಶ್ನೆಗೆ ಉತ್ತರವಾಗಿ ಸಹ 'ಹೌದು' ಎಂದು ಹೇಳಿದ್ದಾರೆ ಇಲ್ಲಿನ ಆಡಳಿತಾಧಿಕಾರಿಯವರು ಟೆಂಡರ್ ಪೊಬಲಗನ್ನು ಕಡಿಮೆ ಮಾಡಿ ಬೇರೆಯವರ ಹೆಸರಿನಲ್ಲಿ ತಾವೇ ಕೆಲಸ ಮಾಡಿಸುತ್ತಿದ್ದಾರೆಂಬ ಆಪಾದನೆಯ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿಲ್ಲ. ಇದಕ್ಕೆ ಉತ್ತರ ಕೊಡಬೇಕು. ಮತ್ತೆ ಎರಡನೆಯ ಪ್ರಶ್ನೆಗೆ ಉತ್ತರವಾಗಿ 'ಈ ವಿಷಯದಲ್ಲಿ ವಿಚಾರಣೆ ಮಾಡಲಾಗಿ ದೂರುಗಳು ನಿಜಾಂಶವಿಲ್ಲವೆಂಬುದಾಗಿ ತಿಳಿದುಬಂದಿದೆ ಎಂದು ಹೇಳಿದ್ದಾರೆ, ಇಲ್ಲಿ ಯಾರ ಬಗ್ಗೆ ದೂರನ್ನು ಕೊಡಲಾಗಿತ್ತೋ, ಅವರನ್ನೇ ವಿಚಾರಿಸಿ ಈ ರೀತಿ ಉತ್ತರ ಕೊಟ್ಟಿರುವುದು ಸರಿಯಲ್ಲ. ಮುಖ್ಯವಾಗಿ ಬೇರೆಯವರ ಹೆಸರಿನಲ್ಲಿ ಅಲ್ಲಿನ ಆಡಳಿತಾಧಿಕಾರಿಯವರು ಕಂಟ್ರಾಕ್ಟ್ ಕೆಲಸವನ್ನು ಮಾಡುತ್ತಿದ್ದಾರೆಂಬ ಆರೋಪದ ಬಗ್ಗೆ ತಮ್ಮ ಬಳಿ ಏನು ಮಾಹಿತಿ ಇದೆ ಎಂಬುದನ್ನು ತಿಳಿಸಬೇಕು?

ಶ್ರೀ ಕೆ. ಅಮರನಾಥಶೆಟ್ಟಿ. — ೧೯೮೧ ರಿಂದ ೧೯೮೭ರವರೆಗೆ ರೂ. ೧.೫೭ ಕೋಟಿ ವೆಚ್ಚದ ೧೪೦ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಈ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಲೋಕೋಪಯೋಗಿ ಇಲಾಖೆಯವರಿಗೆ 'ಡಿಪೊಸಿಟ್ ಕಾಂಟ್ರಿಬ್ಯೂಷನ್ ವರ್ಕ್' ಗಳಾಗಿ ವಹಿಸಲಾಗಿತ್ತು. ಕಾರ್ಯ ನಿರ್ವಾಹಕ ಅಧಿಕಾರಿಗಳು ಎಲ್ಲಾ ಕೆಲಸಗಳಿಗೆ ಆಡಳಿತಾತ್ಮಕ ಮಂಜೂರಾತಿ ಪಡೆದು ನಿಯಮಗಳಿಗನುಸಾರ ಕೆಲಸವನ್ನು ನಿರ್ವಹಿಸಿದ್ದಾರೆ. ಇದಲ್ಲದೆ ಮೇಲಿನ ವಿಷಯಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯವರು ಜವಾಬ್ದಾರಿ ಹಣವನ್ನು 'ಡಿಪೋಸಿಟ್' ಮಾಡುವದಷ್ಟೆ. ಕೆಲಸ ಮಾಡುವ ಜವಾಬ್ದಾರಿ ಲೋಕೋಪಯೋಗಿ ಇಲಾಖೆಯದ್ದು. ೧೯೮೭ರ ಜೂನ್ ಅಂತ್ಯಕ್ಕೆ ಅಭಿವೃದ್ಧಿ ಕಾರ್ಯಗಳಿಗೋಸ್ಕರ ರೂ. ೧.೪೬ ಕೋಟಿ ಹಣ ಖರ್ಚಾಗಿದೆ. ಈ ಎಲ್ಲಾ ಕೆಲಸಗಳು ಡಿಪೊಸಿಟ್ ಕಾಂಟ್ರಿಬ್ಯೂಷನ್ ಕೆಲಸಗಳಾಗಿ ನಿರ್ವಹಿಸಿದ್ದರಿಂದ, ಕಾರ್ಯ ನಿರ್ವಾಹಕ ಅಧಿಕಾರಿಗಳು ಟೆಂಡರ್ ಕರೆಯುವುದು ಬೇಕಾಗಿಲ್ಲ ಮತ್ತೆ ವಾರ್ಷಿಕ ದುರಸ್ತಿ ಬಗ್ಗೆ ಹೇಳಬೇಕೆಂದರೆ ಕಾರ್ಯನಿರ್ವಾಹಕ ಅಧಿಕಾರಿಗಳು ರೂ ೫೦೦೦ ಅಂದಾಜು ವೆಚ್ಚದವರೆಗಿನ ಕೆಲಸಗಳನ್ನು 'ಪೀಸ್ ವರ್ಕ್''ನಲ್ಲಿ ಮಾಡಿಸಲು ಅಧಿಕಾರ ಹೊಂದಿದ್ದಾರೆ. ೧೯೮೧ರಿಂದ ೧೯೮೭ರವರೆಗಿನ ಅವಧಿಯಲ್ಲಿ ಇಂತಹ ೧೪೫ ವಾರ್ಷಿಕ ದುರಸ್ತಿಗಳನ್ನು ನಡೆಸಲಾಗಿದೆ ಇವುಗಳನ್ನು ಕ್ಲಾಸ್-೨ ಮತ್ತು ೩ ಕಂಟ್ರಾಕ್ಟರ ಮೂಲಕ ನಡೆಸಲಾಗಿದೆ ಎಲ್ಲಾ ಬಿಲ್‌ಗಳನ್ನು ಲೋಕೋಪಯೋಗಿ ಇಲಾಖಾ ಅಧಿಕಾರಿಗಳು ಪರಿಶೀಲಿಸಿದ ನಂತರ ಅಂಗೀಕರಿಸಲಾಗಿದೆ. ಆದ್ದರಿಂದ ಈ ವಿಷಯದಲ್ಲಿ ಏನೂ ಅವ್ಯವಹಾರಗಳು ಆಗಿಲ್ಲ

ಶ್ರೀ ಪಿ. ಎಂ. ಚಿಕ್ಕಬೋರಯ್ಯ. — ಚಿನ್ನಸ್ವಾಮಿ ಎಂಬ ಹೆಸರಿನ ಒಬ್ಬರು ಕಂಟ್ರಾಕ್ಟರ್ ಅಲ್ಲಿನ ಎಲ್ಲಾ ಕೆಲಸಗಳನ್ನು ಮಾಡಿಲ್ಲವೇ ಎಂಬ ಬಗ್ಗೆ ತಾವು ಉತ್ತರ ಕೊಡಬೇಕು. ಮತ್ತೆ ಅಲ್ಲಿನ ನೌಕರರಿಗೆ

ಭಡ್ತಿ ಕೊಡುವ ವಿಷಯದಲ್ಲಿ ಅಲ್ಲಿನ ಅಕೌಂಟೆಂಟ್ ಕೆಲಸಕ್ಕೆ ಬಿ.ಕಾಂ. ಪಾಸ್ ಮಾಡಿದವರನ್ನು ನೇಮಕ ಮಾಡುವುದಕ್ಕೆ ಕೇವಲ ಎಸ್. ಎಸ್. ಎಲ್. ಸಿ. ಪಾಸಾದಂಥ ಒಬ್ಬರು ಗುಮಾಸ್ತರನ್ನು ಈ ಹುದ್ದೆಗೆ ನೇಮಕ ಮಾಡಿಕೊಂಡಿರುವುದು ನಿಜವಲ್ಲವೇ ಎಂಬುದನ್ನು ತಾವು ತಿಳಿಸಬೇಕು?

ಶ್ರೀ ಕೆ. ಅಮರನಾಥಶೆಟ್ಟಿ.—ಯಾರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂಬ ಬಗ್ಗೆ ಹೆಸರನ್ನು, ಹೇಳಿದರೆ ವಿವರಗಳನ್ನು ಕೊಡಬಹುದು.

ಶ್ರೀ ಜಿ. ರಾಜೂಗೌಡ.—ಮೇಹದೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಆಲ್ಲಿರತಕ್ಕ ಅಧಿಕಾರಿಗಳು ಸುಮಾರು ೨ ಲಕ್ಷ ರೂಪಾಯಿ ಚಿನ್ನವನ್ನು ಧರ್ಮದರ್ಶಿಗಳಿಗೆ ಗೊತ್ತಿಲ್ಲದಂತೆ ಮಾರಿದುರುಪಯೋಗ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎರಡನೆಯದಾಗಿ ಅಲ್ಲಿ ಒಂದೇ ಕೋಮಿಗೆ ಸೇರಿದಂಥ ೧೨ ಜನರನ್ನು ಆಪಾಯಿಂಟ್ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಇಷ್ಟೆಲ್ಲಾ ದುರ್ವ್ಯವಹಾರ ಆಗಿರುವುದರಿಂದ ಅದಕ್ಕೆ ಸದನದ ಸಮಿತಿ ಮಾಡಿ ದೂರುಗಳನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶಮಾಡಿಕೊಡುತ್ತೀರಾ?

ಶ್ರೀ ಕೆ. ಅಮರನಾಥ ಶೆಟ್ಟಿ.—ಪರಿಶೀಲನೆ ಮಾಡುತ್ತೇನೆ.

Annual Plan of the State for 1987-88

553 SHRI DHARMASINGH (JEWARGI).—Will the Minister for Revenue and planning be pleased to state.

a) whether the planning Department of the State has prepared and published a Draft Annual Plan for the year 1987–88.

b) whether it is a fact that the level of over–all development achieved in different districts based on the composite index of the State have been classified as 'Highly Developed', 'Developed' and 'Backward'and 'Highly Backward.'

c) if so, the clasification assigned to Gulbarga District.

d) the rank of Gulbarga District in the Composite index of development of districts, during 1960–61, 1971–72, 1976–77 and 1985–86.

SRI S. R. BOMMAI.—(Minister for Revenue and Planning).—

a) Yes.

b) Yes.

c) Highly Backward

d)

Year	Rank
1960-61	19
1971-72	19
1976-77	19
1985-86	1[illegible]